

## ಋಣ

ಗುಂಡ ಬ್ಯಾಂಕಿನಿಂದ 10ಲಕ್ಷ ಸಾಲ ತಂದ. ಒಂದು ವರ್ಷವಾದ್ರೂ ಸಾಲ ಹಿಂತಿರುಗಿಸಲಿಲ್ಲ. ಬ್ಯಾಂಕ್ ಮ್ಯಾನೇಜರ್ ಗುಂಡನ ಮನೆಗೆ ಬಂದವರು, 'ಸಾಲ ತಗೊಂಡು ವರ್ಷವಾದ್ರೂ ಯಾಕಯ್ಯಾ ಇನ್ನೂ ತೀರಿಸಿಲ್ಲ?' ಎಂದು ಕೇಳಿದರು. ಅದಕ್ಕೆ ಗುಂಡ,' ಸಾಲ ತಗೋವಾಗ್ಲೇ ಹೇಳಿದ್ನಲ್ಲಾ ಸಾರ್...' ಎಂದ. ಅವರಿಗೆ ಗುಂಡ ಹೇಳಿದ್ದು ನೆನಪಿನಲ್ಲಿ ಇರಲಿಲ್ಲ. ಕೇಳಿದರು, 'ಏನು ಹೇಳಿದ್ದೆ?' ಗುಂಡ, 'ನಿಮ್ಮ ಋಣಾನ ಈ ಜನ್ಮದಲ್ಲಿ ತೀರಿಸೋದಕ್ಕೆ ಆಗೋದಿಲ್ಲಾ' ಅಂತ!

**ಪ.ನಾ.ಹಳ್ಳಿ. ಹರೀಶ್ ಕುಮಾರ್**

## ಬಹುಮಾನ

'ನಿನಗೆ ಚಿತ್ರ ಬಿಡಿಸಲಿಕ್ಕೇ ಬರುವುದಿಲ್ಲ. ಆದರೂ ಚಿತ್ರಕಲಾ ಸ್ಪರ್ಧೆಯಲ್ಲಿ ನಿನಗೆ ಮೊದಲ ಬಹುಮಾನ ಸಿಕ್ಕಿದ್ದು ಹೇಗೆ?' ಎಂದು ರಂಜು ಆಶ್ಚರ್ಯದಿಂದ ಮಂಜುವನ್ನು ಕೇಳಿದ. ಮಂಜು ಖುಷಿಯಿಂದ ಹೇಳಿದ, 'ನಾನು ಬಿಡಿಸಿದ ಚಿತ್ರ ತಲೆಕೆಳಗಾಗಿ ತೂಗು ಹಾಕಿದ್ದರು. ನಿರ್ಣಾಯಕರಿಗೆ ಅದು ಏನು ಎಂಬುದು ಅರ್ಥವಾಗದೇ ಅದ್ಭುತ ಚಿತ್ರ ಇರಬಹುದು ಎಂದು ಮೊದಲ ಬಹುಮಾನ ಕೊಟ್ಟು ಬಿಟ್ಟರು!'

**ದೇವಿದಾಸ ಸುವರ್ಣ**



ಚಿತ್ರಗಳು: ಗಣೇಶ ಆಚಾರ್ಯ